# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ರವರ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ:

### ಸೂಚನೆ:

ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ಉರಗಡೂರು ಗ್ರಾಮದ ಸರ್ವೆ ನಂ. 37/1 ರಲ್ಲಿರುವ 5 ಎಕರೆ 3 ಗುಂಟೆ ಇನಾಂ ಜಮೀನನ್ನು, ನಿಯಮ ಬಾಹಿರವಾಗಿ ಭೂಸ್ವಾಧೀನ ಪಡಿಸಿಕೊಂಡಿದ್ದು, ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

### ಹೇಳಿಕೆ

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ಊರಗಡೂರು ಗ್ರಾಮದ ಸ.ನಂ. 37/1ರ ಜಮೀನು ಮೂಲತ: ಇನಾಂ ಜಮೀನಾಗಿದ್ದು, ಸದರಿ ಜಮೀನನ್ನು ಭೂ ಪರಿವರ್ತನೆ ಮಾಡಲು ಅವಕಾಶವಿಲ್ಲವೆಂದು ಅರ್ಜಿದಾರರಾದ ಶ್ರೀಮತಿ ಲಾವಣ್ಯ ಲತಾ ಕೋಂ.ರಘು ಕಿಶೋರ್ ಇವರಿಗೆ ದಿನಾಂಕ:05.08.2011 ಮತ್ತು 22.07.2011 ರಂದು ಹಿಂಬರಹ ನೀಡಲಾಗಿರುತ್ತದೆ. ಸದರಿ ಹಿಂಬರಹದ ವಿರುದ್ಧ ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು, ಇಲ್ಲಿ ಪ್ರಕರಣ ಸಂಖ್ಯೆ:46174/2011(KLR-RES) ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 06-04-2016 ರಂದು ನೀಡಿರುವ ಆದೇಶದಂತೆ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಆದೇಶ ಸಂಖ್ಯೆ: SMGDC.ALN(1)SR 116/16-17 ದಿನಾಂಕ: 08.09.2016ರಂತೆ ಊರಗಡೂರು ಗ್ರಾಮದ ಸ.ನಂ. 37/1 ರಲ್ಲಿ 4-39 ಎಕರೆ/ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶಿಸಲಾಗಿರುತ್ತದೆ.

ಸದರಿ ಜಮೀನಿಗೆ ಸಂಬಂಧಿಸಿದಂತೆ, ಶ್ರೀ ಅಬ್ದುಲ್ ಖಲಕ್ ಬಿನ್ ನೂರು ಅಹ್ಮದ್ ಸಾಬ್ ಹಾಗೂ ಇತರೆ ಇಬ್ಬರು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ ಶಿವಮೊಗ್ಗ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: O.S.149/2021 ರಂತೆ ಮೊಕದ್ದಮೆಯನ್ನು ದಾಖಲಿಸಿರುವ ಹಿನ್ನಲೆಯಲ್ಲಿ, ಸದರಿ ಪ್ರಕರಣ ಇತ್ಯರ್ಥವಾಗುವವರೆಗೆ ಸದರಿ ಜಮೀನಿನ ಮೇಲೆ ಯಾವುದೇ ಕ್ರಯ ವಿಕ್ರಯಗಳು ನಡೆಯದಂತೆ ಹಾಗೂ ಹೊಸದಾಗಿ ಯಾವುದೇ ಖಾತೆ ನೋಂದಾವಣೆ ಮಾಡದಂತೆ ಯಥಾಸ್ಥಿತಿಯನ್ನು ಕಾಪಾಡುವಂತೆ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ: SMGDC.ALN1/MISC/88/2020(E-48411) ದಿನಾಂಕ:11.01.2022ರಂತೆ ಆಯುಕ್ತರು. ಮಹಾನಗರ ಪಾಲಿಕೆ, ಆಯುಕ್ತರು, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ ಶಿವಮೊಗ್ಗ, ಉಪವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ, ತಹಶೀಲ್ದಾರ್, ಶಿವಮೊಗ್ಗ ತಾಲ್ಲೂಕು ಹಾಗೂ ಉಪನೊಂದಣಾಧಿಕಾರಿ, ಶಿವಮೊಗ್ಗ ರವರಿಗೆ ನಿರ್ದೇಶನ ನೀಡಲಾಗಿರುತ್ತದೆ

ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರು ನೀಡಿದ ಯಥಾಸ್ಥಿತಿಯ ನಿರ್ದೇಶವನ್ನು ಪ್ರಶ್ನಿಸಿ, ಶ್ರೀಮತಿ ಲಾವಣ್ಯ ಲತಾ ಕೋಂ. ರವಿ ಕಿಶೋರ್ ರವರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 4246/2023 ನ್ನು ದಾಖಲಿಸಲಾಗಿದ್ದು, ಈ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

[ಕೃಷ್ಣ ಬೈರೇಗೌಡ]
ಕಂದಾಯ ಸಚಿವರು.

**ಸಂಖ್ಯೆ: ಆರ್‌ಡಿ 04 ಎಲ್‌ಆರ್‌ಎಸ್ 2026**

Scanned with OKEN Scanner